<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>

<u>ಸವಣೂರು.</u>

ಅಪರಾಧ ಸಂಖ್ಯೆ: 297/2016

ಪಿಡಬ್ಲ್ಯೂ: 01 ಸಿಡಬ್ಲ್ಯೂ : 05
ದಿನಾಂಕ: 23-10-2018
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಸಾಕ್ಷಿದಾರರ ಹೆಸರು - ಡಾ|| ಚಂದ್ರಕಲಾ ಜೆ.

ತಂದೆ/ಗಂಡನ ಹೆಸರು - ಸುದರ್ಶನ

ವಯಸ್ಸು - 48 ವರ್ಷಗಳು

ಉದ್ಯೋಗ - ಜಿಲ್ಲಾ ಕ್ಷಯ ನಿಯಂತ್ರಣ ಅಧಿಕಾರಿಗಳು ಗದಗ

ವಾಸ ಸ್ಥಳ - ಗದಗ

<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ.</u>

ನಾನು 2007 ರಿಂದ 2016 ರವರೆಗೆ ಯಲವಿಗಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಹಾಗೂ ಪ್ರಭಾರ ತಾಲೂಕಾ ಆರೋಗ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 09-07-2015 ರಂದು ಮುಂಜಾನೆ 10-45 ಗಂಟೆಗೆ ಚಾಸಾ 4 ರವರು ನನಗೆ ಕರೆ ಮಾಡಿ ಅವರ ಕಚೇರಿಗೆ ಕರೆಯಿಕೊಂಡಿದ್ದರು. ನಾನು ಅವರ ಕಚೇರಿಗೆ ಹೋದೆನು. ಸವಣೂರಿನ ಲಾಲಶಾಕಟ್ಟೆಯಲ್ಲಿರುವ ಬನ್ನೂರ ಅವರ ಕ್ಲಿನಿಕ್ ಗೆ ಹೋಗಿ ಪರೀಕ್ಷೆ ಮಾಡೋಣ ಎಂದು ಚಾಸಾ 4 ರವರು ನನಗೆ ಹೇಳಿದರು. ಅಲ್ಲಿ ಸದರಿ ಕ್ಲಿನಿಕ್ ಕೆಪಿಎಂಇ ಕಾಯ್ದೆ ಯಡಿಯಲ್ಲಿ ನೋಂದಣಿ ಆಗಿದೆಯೋಗ ಅಥವಾ ಹೇಗೆ ಮತ್ತು ನಕಲಿ ವೈದ್ಯರು ಇರುತ್ತಾರೋ ಹೇಗೆ ಎಂದು ಪರೀಕ್ಷೆ ಮಾಡಲು ನಾವೆಲ್ಲರೂ ಹೋಗಿದ್ದೆವು. ನನ್ನ ಜೊತೆಗೆ ಚಾಸಾ 1, 4, 6 ರಿಂದ 8 ಹಾಗೂ ಇಬ್ಬರು ಪೋಲಿಸ ಪೇದೆಗಳು ಇದ್ದರು. ನಾವೆಲ್ಲರುಾ ಕೂಡಿ ಲಾಲಶಾಕಟ್ಟೆಯ ಬನ್ನೂರ ಆಸ್ಪತ್ರೆಗೆ ಹೋದಾಗ, ಸದರಿ ಆಸ್ಪತ್ರೆಯಲಿಲ ಮರಡಿ ಎನ್ನುವ ವೈದ್ಯರು ಇದ್ದರು. ಮರಡಿ ವೈದ್ಯರಿಗೆ ಚಾಸಾ 4 ರವರು ಎಷ್ಟು ಜನರಿಗೆ ಔಷದೋಪಚಾರವನ್ನು ಮಾಡಿರುತ್ತಿರಿ ಎಂದು ಕೇಳಿರುತ್ತಾರೆ. ಬನ್ನೂರ ಆಸ್ಪತ್ರೆಯಲ್ಲಿ ನಾವು ಹೋದಾಗ ಒಬ್ಬ 60 ವರ್ಷದ ಮಹಿಳಾ ರೋಗಿ ಇದ್ದರು. ಚಾಸಾ 4 ರವರು ಆರೋಪಿಯನ್ನು ಕರೆಸಿ, ಕ್ಲಿನಿಕ್ ನಡೆಸಲು ಪರವಾನಿಗೆ ಇರುವ ಬಗ್ಗೆ ಕಾಗದ ಪತ್ರಗಳನ್ನು ಪರಿಶೀಲನೆ ಮಾಡಿರುತ್ತಾರೆ. ಸದರಿ ಆಸ್ಪತೆರಯಲ್ಲಿ ಉಪಯೋಗಿಸುತ್ತಿದ್ದ ಔಷಧಗಳನ್ನು ಜಪ್ತು ಪಡಿಸಿಕೊಂಡಿರುತ್ತೇವೆ. ಆರೋಪಿತನು ಸಂಬಂಧಪಟ್ಟ ವಿಶ್ವ ವಿದ್ಯಾನಿಲಯದಿಂದ ಡಾಕ್ಟರ ಪದವಿಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಆರೋಪಿತನು ನಡೆಸುತ್ತಿದ್ದ ಕ್ಲಿನಿಕ್ ಕೆಪಿಎಂಇ ಕಾಯ್ದೆ ಯಡಿಯಲ್ಲಿ ನೋಂದಣಿ ಆಗಿರುವುದಿಲ್ಲ ಎಂದು ನಮಗೆ ಕಂಡು ಬಂದಿರುತ್ತದೆ. ಚಾಸಾ 4 ರವರ ಕಚೇರಿಯ ಸಿಬ್ಬಂದಿ ಇಬ್ಬರು ಜನ ಇದ್ದರು. ಆ ದಿವಸ ಬನ್ನೂರ ಆಸ್ಪತ್ರೆಗೆ ಹೋದಾಗ ಮುಂಜಾನೆ 11-00 ಗಂಟೆ ಆಗಿತ್ತು. ಸದರಿ ಆಸ್ಪತ್ರೆಯಲ್ಲಿ ಔಷದಗಳನ್ನು ಚಾಸಾ 1, 4 ಹಾಗೂ 6 ರಿಂದ 8 ರವರು ಮತ್ತು ಇನ್ನೂ ಇಬ್ಬರು ಚಾಸಾ 4 ರವರ ಕಚೇರಿಯ ಸಿಬ್ಬಂದಿಗಳು ಇದ್ದರು. ಇವರೆಲ್ಲರ ಸಮಕ್ಷಮ ಔಷಧಗಳನ್ನು ಜಪ್ತುಪಡಿಸಿಕೊಂಡಿರುತ್ತೇವೆ. ಆರೋಪಿತನು ರೋಗಿಗಳಿಗೆ ಯಾವ ರೀತಿ ಉಪಚಾರವನ್ನು ಕೊಡುತ್ತಿದ್ದ ಹಾಗೂ ಸದರಿ ಉಪಚಾರದಿಂದ ಯಾವ ತರಹ ಪ್ರತಿಕ್ರಯಿಸುತ್ತಿತ್ತು ಎಂದು ಆರೋಪಿತನು ನಮಗೆ ಹೇಳಿರುವುದಿಲ್ಲ ಮರಡಿ ವೈದ್ಯರು ಆರೋಪಿತನ ಕ್ಲಿನಿಕ್ ನಲ್ಲಿ ಕೆಲಸ ಮಾಡುತ್ತೇನೆ ಎಂದು ನಮಗೆ ಹೇಳಿರುತ್ತಾರೆ. ಒಂದು ಆಸ್ಪತ್ರೆಯು ಕೆ ಪಿ ಎಂ ಇ

ಕಾಯ್ದೆ ಅಡಿಯಲ್ಲಿ ನೋಂದಣಿ ಆಗಬೇಕಾದರೆ, ಆಸ್ಪತ್ರೆಯ ಬ್ಲೂಪ್ರಿಂಟನ್ನು ನಾವು ಪಡೆಯುತ್ತೇವೆ. ಸದರಿ ಆಸ್ಪತ್ರೆಯು ನೋಂದಣಿ ಮಾಡಿಸಲು ಯೋಗ್ಯ ಇದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಪರೀಶಿಲನೆ ಮಾಡಿ ಡಿ ಹೆಚ್ ಓ ಅವರು ಪರವಾನಿಗೆಯನ್ನು ನೀಡುತ್ತಾರೆ. ನಾನು ಹಾಗೂ ಚಾಸಾ 1 ರವರು ಸದರಿ ಆಸ್ಪತ್ರೆಯಲ್ಲಿ ದೊರೆತ ಔಷದಗಳನ್ನು ಫಾರ್ಮಾಸಿಸ್ಟಗಳು ಲೆಕ್ಕ ಹಾಕಿ ಶೀಲು ಮಾಡಿ ಅರಗ ಹಚ್ಚಿ ನಮ್ಮ ಸಮಕ್ಷಮ ಪೋಲಿಸರಿಗೆ ಸದರಿ ವಸ್ತುಗಳನ್ನು ಹಸ್ತಾಂತರ ಮಾಡಿರುತ್ತೇವೆ. ಈ ಕುರಿತು ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ತಾನು ಸಹಿ ಮಾಡಿದ ದಾಖಲೆಯನ್ನು ನೋಡಿ ಗುರ್ತಿಸಿದ್ದು ಅದನು ಪಂಚನಾಮೆಯಾಗಿದ್ದು ಅದನ್ನು ನಿ.ಪಿ 1 ಎಂದು ಗುರ್ತಿಸಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ 1 (ಎ) ಎಂದು ಗುರ್ತಿಸಲಾಯಿತು. ಅದೇ ದಿನ ಮುಂಜಾನೆಯಿಂದ ಮದ್ಯಾನ ಅವಧಿಯಲ್ಲಿ ನಿ.ಪಿ 1 ಕ್ಕೆ ನಾನು ಸಹಿ ಮಾಡಿರುತ್ತೇನೆ.

1. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 1 ರಲ್ಲಿರುವ LIVGAIN ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 1 ರಲ್ಲಿ ಇರುವ ಔಷಧವನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು 1 ಎಂದು ಗುರ್ತಿಸಲಾಯಿತು.

2. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 2 ರಲ್ಲಿರುವ ಎರಡು KOF AID ( COUGH SYRUP) ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 2 ರಲ್ಲಿ ಇರುವ ಔಷಧವನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು 2 ಎಂದು ಗುರ್ತಿಸಲಾಯಿತು.

3. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 3 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 3 ರಲ್ಲಿ ಇರುವ 9 ಬಿ ಪಿ ಏಡ್ ಸಿರಪಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು ನಂ. 3 ಎಂದು ಗುರ್ತಿಸಲಾಯಿತು.

4. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 4 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 4 ರಲ್ಲಿ ಇರುವ Triglycerides Kit ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 4 ಎಂದು ಗುರ್ತಿಸಲಾಯಿತು.

5. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 5 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 5 ರಲ್ಲಿ ಇರುವ ಗುಳಿಗೆಗಳು ಇರುವ ಡಬ್ಬಿಯನ್ನು ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 5 ಎಂದು ಗುರ್ತಿಸಲಾಯಿತು.

6. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 6 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 6 ರಲ್ಲಿ ಇರುವ ಇನ್ನೊಂದು ಗುಳಿಗೆಗಳು ಇರುವ ಡಬ್ಬಿಯನ್ನು ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 6 ಎಂದು ಗುರ್ತಿಸಲಾಯಿತು.

7. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 7 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 7 ರಲ್ಲಿ ಇರುವ ಇನ್ನೊಂದು ಗುಳಿಗೆಗಳು ಇರುವ ಡಬ್ಬಿಯನ್ನು ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 7 ಎಂದು ಗುರ್ತಿಸಲಾಯಿತು.

8. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 8 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 8 ರಲ್ಲಿ ಇರುವ ಇನ್ನೊಂದು ಗುಳಿಗೆಗಳು ಇರುವ ಚೀಟನ್ನು ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 8 ಎಂದು ಗುರ್ತಿಸಲಾಯಿತು.

9. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 9 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 9 ರಲ್ಲಿ ಇರುವ NATRUM MUR 30 DILUTION ಮತ್ತು GYMNEMA SYL 3X ನೋಡಿ ಗುರ್ತಿಸಿದ್ದು ಅವುಗಳನ್ನು ಕ್ರಮವಾಗಿ ಮುದ್ದೆ ಮಾಲು ನಂ 9 ಮತ್ತು 10 ಎಂದು ಗುರ್ತಿಸಲಾಯಿತು.

10. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 10 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 10 ರಲ್ಲಿ ಇರುವ B-SHAPE CREAM ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 11 ಎಂದು ಗುರ್ತಿಸಲಾಯಿತು.

11. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 11 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 11 ರಲ್ಲಿ ಇರುವ BLATTA ORIENT Q ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 12 ಎಂದು ಗುರ್ತಿಸಲಾಯಿತು.

12. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 12 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 12 ರಲ್ಲಿ ಇರುವ NASAL AID BREATHE FREE ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 13 ಎಂದು ಗುರ್ತಿಸಲಾಯಿತು.

13. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 13 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 13 ರಲ್ಲಿ ಇರುವ CHOLESTEROL SR KIT 75 ml and 5 ml ನೋಡಿ ಗುರ್ತಿಸಿದ್ದು ಅವುಗಳನ್ನು ಒಟ್ಟಾಗಿ ಮುದ್ದೆ ಮಾಲು ನಂ. 14 ಎಂದು ಗುರ್ತಿಸಲಾಯಿತು.

14. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 14 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 14 ರಲ್ಲಿ ಇರುವ STAINED SALMONELLA ANTIGEN SET 3 ಎಂ ಎಲ್ ಹಾಗೂ 5 ಎಂ ಎಲ್ ಒಟ್ಟು 5 ಸಣ್ಣ ಬಾಟಲಿಗಳನ್ನು ನೋಡಿ ಗುರ್ತಿಸಿದ್ದು ಅದನ್ನು ಒಟ್ಟಾಗಿ ಮುದ್ದೆ ಮಾಲು ನಂ. 15 ಎಂದು ಗುರ್ತಿಸಲಾಯಿತು.

15. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 15 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 15 ರಲ್ಲಿ ಇರುವ GULCOSE KIT 150 ml and 5 ml ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 16 ಎಂದು ಗುರ್ತಿಸಲಾಯಿತು.

16. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 16 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 16 ರಲ್ಲಿ ಇರುವ HAIR COLOR BLACK ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 17 ಎಂದು ಗುರ್ತಿಸಲಾಯಿತು.

17. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 17 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 17 ರಲ್ಲಿ ಇರುವ SUCTION CETHATER MASK and 3 envelopes ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 18 ಎಂದು ಗುರ್ತಿಸಲಾಯಿತು.

18. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 18 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 18 ರಲ್ಲಿ ಇರುವ D zone tablets ಗಳ 4 ಸ್ಟ್ರಿಪ್ಸ ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 19 ಎಂದು ಗುರ್ತಿಸಲಾಯಿತು.

19. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 20 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 20 ರಲ್ಲಿ ಇರುವ PYRAKEM ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 20 ಎಂದು ಗುರ್ತಿಸಲಾಯಿತು.

20. ಸ್ವತ್ತಿನ ಪಟ್ಟಿಯಲ್ಲಿರುವ ಅನುಕ್ರಮ ನಂ 21 ನ್ನು ಶೀಲು ಮಾಡಿದ್ದನ್ನು ಉಭಯ ಪಕ್ಷಗಾರರ ಸಮಕ್ಷಮ ಹರಿದು ನೋಡಲಾಗಿ ಸದರಿ ಅನುಕ್ರಮ ನಂ 21 ರಲ್ಲಿ ಇರುವ FULLFORM ನೋಡಿ ಗುರ್ತಿಸಿದ್ದು ಅದನ್ನು ಮುದ್ದೆ ಮಾಲು ನಂ. 21 ಎಂದು ಗುರ್ತಿಸಲಾಯಿತು.

ಈ ಹಂತದಲ್ಲಿ ಮಾನ್ಯ ಸ.ಸ.ಅ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು. ಸವಣೂರು.